## ಶಿರಸಿಯ ಎಮ್.ಇ.ಎಸ್.ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್‌ನಲ್ಲಿ ಕಾರ್ಯಕ್ರಮ

**ವೃತ್ತಿಶಿಕ್ಷಣ/ ಇಂಜನಿಯರಿಂಗ್ ಓದುವ ವಿದ್ಯಾರ್ಥಿಗಳಿಗೆ, ಭಾರತ ರತ್ನ ಪ್ರಶಸ್ತಿ ವಿಜೇತರಾದ ದಿ॥ ಸರ್ ಎಮ್. ವಿಶ್ವೇಶ್ವರಯ್ಯನವರೇ ಆದರ್ಶ ವ್ಯಕ್ತಿಗಳು – ಶ್ರೀ ಜಿ.ಎಸ್. ಹೆಗಡೆ , ಹಲಸರಿಗೆ.**

ಇಂದಿನ ದಿನಗಳಲ್ಲಿ ಹೆಚ್ಚಿನ ಉದ್ಯೋಗಾವಕಾಶಕ್ಕೆ ದಾರಿ ಇರುವ ವೃತ್ತಿ ಶಿಕ್ಷಣವನ್ನು ಆಯ್ದು ಕೊಂಡು, ಭವಿಷ್ಯದ ಇಂಜನಿಯರ್ ಆಗುವ ಕನಸನ್ನು ಹೊತ್ತಿರುವ ವಿದ್ಯಾರ್ಥಿಗಳು, ಭಾರತರತ್ನ ಪ್ರಶಸ್ತಿ ವಿಜೇತರಾದ ದಿ॥ ಸರ್ ಎಮ್. ವಿಶ್ವೇಶ್ವರಯ್ಯನವರನ್ನೂ ಜೀವನದ ಉದ್ದಕ್ಕೂ ಮಾದರಿಯಾಗಿರಿಸಿಕೊಳ್ಳಬೇಕೆಂದು, ಶ್ರೀ ಜಿ. ಎಸ್. ಹೆಗಡೆಯವರು ಕರೆ ನೀಡಿದರು.



ಶ್ರೀಯತರು ಎಮ್.ಇ.ಎಸ್.ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್‌ನಲ್ಲಿ ಪ್ರಥಮ ವರುಷದ ವಿದ್ಯಾರ್ಥಿಗಳಿಗೆ ದಿನಾಂಕ 17-07-2023ರಂದು ಏರ್ಪಡಿಸಿದ ಇಂಡಕ್ಷನ್ ಕಾರ್ಯಕ್ರಮದಡಿ ಮಾತನಾಡುತ್ತ, ಅತೀ ಸರಳವಾಗಿ ವಿದ್ಯಾರ್ಥಿಗಳಿಗೆ, ಚಿಕ್ಕ–ಚೊಕ್ಕ ಉದಾಹರಣೆಗಳೊಂದಿಗೆ , ಮೆಕ್ಯಾನಿಕಲ್, ಸಿವಿಲ್, ಇಲೆಕ್ಟ್ರಾನಿಕ್ಸ್, ಇಲೆಕ್ಟ್ರಿಕಲ್ ಇಂಜನಿಯರಿಂಗ್ ಕೋರ್ಸಗಳ ಬಗ್ಗೆ ಅತೀ ಹೆಚ್ಚು ವಿಷಯ ಅರಿಯುವಂತೆ ಮಾಡಿದರು.

ಶ್ರೀಯತ ಜಿ. ಎಸ್. ಹೆಗಡೆಯವರು ಮೆಕ್ಯಾನಿಕಲ್ ವಿಭಾಗದ ಉಪನ್ಯಾಸಕರಾಗಿ ತಮ್ಮ ವೃತ್ತಿ ಜೀವನವನ್ನು 1981-1984 ರ ಅವಧಿಯಲ್ಲಿ , ಸರಾಕಾರಿ ಪಾಲಿಟೆಕ್ನಿಕ್ –ಕಾರವಾರದಲ್ಲಿ , 1984 ರಿಂದ 1990 ರವರೆಗೆ ಕಿರ್ಲೋಸ್ಕರ ಎಲೆಕ್ಟ್ರಿಕ್ ಲಿ. ಬೆಂಗಳೂರಿನಲ್ಲಿ, 1990-2021 ರವರೆಗೆ ಸಾರಿಗೆ ಇಲಾಖೆಯಲ್ಲಿ , ಇನ್ಸ್ ಪೆಕ್ಟರ್, ಅಸಿಸ್ಟಂಟ್ ಆರ್. ಟಿ. ಓ., ಆರ್. ಟಿ. ಓ, ಡೆಪ್ಯೂಟಿ ಕಮೀಶನರ್ ಆಗಿ ಸಾಗರ, ಶಿವಮೊಗ್ಗ, ಬೆಂಗಳೂರು, ಮಂಗಳೂರು, ದಾವಣಗೆರೆಯಲ್ಲಿ ಸೇವೆ ಸಲ್ಲಿಸಿ, 2021ರಲ್ಲಿ ನಿವೃತ್ತರಾಗಿ , ಪ್ರಸ್ತುತ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಶ್ರೀಯತರು , ರಸ್ತೆ–ಸುರಕ್ಷತೆ ಬಗ್ಗೆ ಹಲವಾರು ಉಪಯುಕ್ತ ಮಾಹಿತಿಗಳೊಂದಿಗೆ , ಯುವ ಸಮುದಾಯವನ್ನು ಜಾಗೃತಗೊಳಿಸಿದ್ದಾರೆ.

ಅವುಗಳಲ್ಲಿ ಮೊದಲನೆಯದು "ವಾಹನಾ ಚಾಲನಾ ಲೈಸನ್ಸ್" ಇಲ್ಲದೇ ವಾಹನ ಚಲಾಯಿಸುವುದು, ಮತ್ತು ಚಾಲನೆಗೆ ವಾಹನದ ಕೀ ಯನ್ನು ನೀಡುವುದು ಘೋರ ಅಪರಾಧ. ಪಾಲಕರು 18 ಕ್ಕಿಂತಲೂ ಕಡಿಮೆ ವಯಸ್ಸಿನ ತಮ್ಮ ಮಕ್ಕಳ ಸಂತೋಷಕ್ಕಾಗಿ , ವಾಹನದ ಕೀ ಯನ್ನು ನೀಡಿದರೆ , ಅದು ಹಿರಿಯರಿಗಾಗುವ ಕಿರಿ–ಕಿರಿಯೇ ಸರಿ, ಏನಾದರು ಅಪಘಾತವಾದರೆ , ಯಾರು ಹೊಣೆ ? ಇವೆಲ್ಲದಕ್ಕೂ ವಾಹನ ಮಾಲಕರು/ಪಾಲಕರೇ ಹೊಣೆಗಾರರಾಗುತ್ತಾರೆ.

ಎರಡನೆಯದು "ವೀಲಿಂಗ್–ಫೀಲಿಂಗ್". ಯುವಕರು ಕಾಲೇಜಿನ ಆವರಣದಲ್ಲಿ ಮತ್ತು ಸಾರ್ವಜನಿಕ ಸ್ಥಳದಲ್ಲಿ ದ್ವಿಚಕ್ರ ವಾಹನ ಚಾಲನೆ ಮಾಡುವಾಗ, ತಮಾಷೆಗಾಗಿ, ಮೋಜು–ಮಸ್ತಿಗಾಗಿ, ಯುವ ಮಿತ್ರರ ನಡುವಿನ ಹಿರೋ ಆಗಬೇಕೆಂಬ ಕನಸಿನಲ್ಲಿ ವೀಲಿಂಗ್ ಮಾಡಲು ಹೋಗಿ, ಅಪಘಾತಕ್ಕೆ ಒಳಗಾಗಿ ಮರಣಹೊಂದಿ, ಕೈ–ಕಾಲು ಮುರಿದುಕೊಂಡು ಕುಟುಂಬದವರು ಜೀವನಪರ್ಯಂತ ಬ್ಯಾಡ್ ಫೀಲಿಂಗ್‌ನಲ್ಲಿ ಇರಲು ಕಾರಣರಾಗುತ್ತಿದ್ದಾರೆ. ಇಂತಹ ಘಟನೆಗಳು ಬಹುತೇಕ ಕಾಲೇಜು ವಿದ್ಯಾರ್ಥಿಗಳಿಂದಲೇ ಆಗುವುದರಿಂದ, ಅಂತಹ ವಿದ್ಯಾರ್ಥಿಗಳ ವಿಳಾಸವನ್ನು ಸಾರಿಗೆ ಇಲಾಖೆ /ಪೋಲೀಸ್ ಇಲಾಖೆಗೆ ತಿಳಿಸಬೇಕೆಂದು, ಪ್ರಾಚಾರ್ಯರಿಗೆ ಕರೆ ನೀಡಿ, ವಿದ್ಯಾರ್ಥಿಗಳನ್ನು ಎಚ್ಚರಿಸಿದರು.

ಮೂರನೆಯದಾಗಿ ಪಾದಚಾರಿ ಸುರಕ್ಷತೆಯ ಬಗ್ಗೆ , ನಮ್ಮ ಶಿರಸಿ ಪಟ್ಟಣದ ಪೂಟ್–ಪಾತ್ ಇಲ್ಲದ ಸಿ. ಪಿ. ಬಜಾರ್ ರೋಡಿನ ಉದಾಹರಣೆಯೊಂದಿಗೆ , ಪೂಟ್–ಪಾತ್ ಇಲ್ಲದ ಕಡೆ ರಸ್ತೆಯ ಬಲಬದಿಗೂ, ಸುರಂಗ ಮಾರ್ಗಗಳಿದ್ದಲ್ಲಿ, ಸುರಂಗ ಮಾರ್ಗದಲ್ಲಿಯೇ ನಡೆಯಬೇಕೆಂದು ಹೇಳಿದರು. ಅಲ್ಲದೇ ಇನ್ನೂ ಹತ್ತು ಹಲವು ನಿಯಮಗಳನ್ನು ಜೀವದ ಸುರಕ್ಷತೆಗಾಗಿ , ತಿಳಿಸಿದರು.

ತಮ್ಮ ಸಾಮಾಜಿಕ ಕಳ–ಕಳಿ ಇಂದ , ತಾವು ಸೇವೆ ಪ್ರಾರಭಿಸಿದ ಸರಕಾರಿ ಪಾಲಿಟೆಕ್ನಿಕ್ –ಕಾರವಾರ ಇದರ ಸ್ವರೂಪಿಯಾದ ಎಮ್. ಇ. ಎಸ್. ಆರ್. ಎನ್. ಶೆಟ್ಟಿ ಪಾಲಿಟೆಕ್ನಿಕ್‌ನ ಮೇಲಿರುವ ಅಭಿಮಾನದಿಂದ ಸಂಪನ್ಮೂಲ ವ್ಯಕ್ತಿಗಳಾಗಿ ಬಂದು, ಹಲವಾರು ಉಪಯುಕ್ತ ಮಾಹಿತಿಗಳನ್ನು ನೀಡಿ ಹೊಸದಾಗಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳನ್ನು ಜಾಗೃತಗೊಳಿಸಿದ್ದಲ್ಲದೇ , ಸಂಸ್ಥೆಗೆ ಸುಮಾರು ರೂ 20,000/- ಮೌಲ್ಯದ , ತಾಂತ್ರಿಕ ಪುಸ್ತಕಗಳನ್ನು ಗ್ರಂಥಾಲಯಕ್ಕೆ ನೀಡಿದರು. ಶ್ರೀಯತರಿಗೆ ಸಂಸ್ಥೆಯು ಚಿರ–ಋಣಿ ಯಾಗಿರುವುದಲ್ಲದೇ, ಇದು ಎಲ್ಲರಿಗೂ ಒಂದು ಮಾದರಿಯಾಗಲಿ ಎಂಬುದೇ ಸಂಸ್ಥೆಯ ಆಶಯವೆಂದು ಪ್ರಾಚಾರ್ಯರು ಅಪೇಕ್ಷಿಸಿದರು.

ಪ್ರಾಚಾರ್ಯರಾದ ಶ್ರೀ ಎಮ್. ಆರ್ ಶೆಟ್ಟಿ ಯವರು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಜಿ. ಎಸ್. ಹೆಗಡೆಯವರನ್ನು ಹೂ–ಗುಚ್ಛ ನೀಡಿ ಸ್ವಾಗತಿಸಿದರು. ಇಲೆಕ್ಟ್ರಿಕಲ್ ವಿಭಾಗದ ಮುಖ್ಯಸ್ಥರಾದ ಶ್ರೀ ಜಗನ್ನಾಥರವರು ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು. ತಮ್ಮ ವೃತ್ತಿ ಜೀವನದ ಉದ್ದಕ್ಕೂ ದಕ್ಷ–ಪ್ರಾಮಾಣಿಕ ಸೇವೆಸಲ್ಲಿಸಿ, ನಿವೃತ್ತಿಯ ನಂತರವೂ, ವೃತ್ತಿಜೀವನದ ಕರ್ತವ್ಯದ ಅಂಶಗಳು ಸಮಾಜದ ಒಳಿತಿಗೆ ಯಾವತ್ತೂ ಸಿಗಲಿ ಎನ್ನುವ ಉದ್ದೇಶದಿಂದ " **ಸುರಕ್ಷಿತವಾಗಿ ತಲುಪಿ**" ಎನ್ನುವ ಸ್ವಬರಹದ ಪುಸ್ತಕದ ಮುಖಾಂತರ, ಹಾಗು ಸಂಸ್ಥೆಯ ವಿವಿಧ ಕೋರ್ಸಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಸುವಂತೆ ಮಾಡಿ, ಉಪನ್ಯಾಸಕರಿಗೂ ಒತ್ತಡ ಕಡಿಮೆಯಾಗಲು ಸಹಕರಿಸಿದರು ಎಂದು ಉಪನ್ಯಾಸಕರು/ಕಾರ್ಯಕ್ರಮ ನಿರ್ವಾಹಕರೂ ಆದ ಶ್ರೀ ಸಂಜಯ ಕೂರ್ಸೆಯವರು ಅಭಿಪ್ರಾಯಪಡುತ್ತ, ವಂದನಾರ್ಪಣೆಯೊಂದಿಗೆ , ಶ್ರೀಯತ ಜಿ. ಎಸ್. ಹೆಗಡೆಯವರನ್ನು ಸಂಸ್ಥೆಯು ಯಾವತ್ತೂ ಸ್ಮರಿಸತ್ತದೆ, ಎಂದು ಹೇಳಿ, ಕಾರ್ಯಕ್ರಮವನ್ನು ಸಮಾಪ್ತಿಗೊಳಿಸದರು.